ಚಿಮಣಿಎಣ್ಣೆಯ ಬಗ್ಗೆ ಕೇಳಿದ ಕೂಡಲೇ ಸುಷ್ಮಾಳ ಮುಖ ಅರಳಿತು. ಅವಳು ಅವಸರದಿಂದ ಬಾಗಿಲ ಬಳಿ ಬಂದು ನಿಂತು,

"ನೀನು ನಮಗೆ ಚಿಮಣಿಎಣ್ಣೆ ತಂದು ಕೊಡುವೆಯಾ?" ಎಂದು ಕೇಳಿದಳು.

"ಇಲ್ಲಿನ ರೇಶನ್ ಅಂಗಡಿಯಾತ ನನ್ನ ಗೆಳೆಯ. ಆತ ಚಿಮಣಿಎಣ್ಣೆಯನ್ನು ಬ್ಲ್ಯಾಕಿನಲ್ಲಿ ಮಾರುತ್ತಾನೆ. ಒಂದು ಲೀಟರಿಗೆ 30 ರೂ. ತೆಗೆದುಕೊಳ್ಳುತ್ತಾನೆ. ತಮಗೆ ಬೇಕಾಗಿದ್ದರೆ ನಾನು ತಂದುಕೊಡಬಲ್ಲೆ" ಎಂದ ಆತ.

ಸುಷ್ಮಾ ಚಿಮಣಿಎಣ್ಣೆ ಡಬ್ಬಿ ಮತ್ತು ನೂರರ ನೋಟೊಂದನ್ನು ತಂದು ಅವನ ಕೈಗೆ ಕೊಡುತ್ತ, "ಎರಡು ಲೀಟರ್ ತೆಗೆದುಕೊಂಡು ಬಾ" ಎಂದಳು.

ಆತ ಹೊರಟು ನಿಂತ.

"ನಿಲ್ಲು, ಮೊದಲು ನಿನ್ನ ಹೆಸರೇನು ಹೇಳು, ಮಮತಾ ನಿನಗೆ ಹೇಗೆ ಪರಿಚಯ" ನಾನು ಕೇಳಿದೆ.

ನನ್ನ ಮಾತಿನಲ್ಲಿಯ ಗಡಸುತನ ಬಹುಶಃ ಸುಷ್ಮಾಳಿಗೆ ಸರಿಯೆನಿಸಲಿಲ್ಲ. ಅವಳು ಕಣ್ಣು ದೊಡ್ಡದು ಮಾಡಿ ನನ್ನತ್ತ ನೋಡಿದಳು.

"ನನ್ನ ಹೆಸರು ಸಾಥಿಯಾ. ಮಮತಾ ಅಷ್ಟೇ ಏಕೆ, ಇಡೀ ಬೀದಿಯ ಜನರು ನನ್ನನ್ನು ಇದೇ ಹೆಸರಿನಿಂದ ಗುರುತಿಸುತ್ತಾರೆ" ಎಂದು ಹೇಳುವಾಗ ಅವನ ಮುಖದ ಮೇಲೆ ನಗು ಸೂಸುತ್ತಿತ್ತು.

ಸುಷ್ಮಾ ತನ್ನ ದನಿಯಲ್ಲಿ ಸಾಧ್ಯವಿದ್ದಷ್ಟು ಮೃದುತ್ವವನ್ನು ತಂದು, "ಸಾಥಿಯಾ ದಾದಾ, ನೀನು ನನ್ನ ಇನ್ನೊಂದು ಕೆಲಸವನ್ನು ಮಾಡಿಕೊಡುತ್ತೀಯಾ?" ಎಂದು ಕೇಳಿದಳು.

"ಅಗತ್ಯವಾಗಿ ಮಾಡಿಕೊಡುತ್ತೇನೆ. ಹೇಳಿರಿ, ಏನು ಮಾಡಿಕೊಡಬೇಕು?"

"ಸಾಧ್ಯವಾದರೆ ಎರಡು ಲೀಟರ್ ಹಾಲು ತಂದುಕೊಡು. ಬಹಳ ಉಪಕಾರವಾಗುತ್ತದೆ."

"ಹಣ ಕೊಡಿರಿ. ತಂದು ಕೊಡುತ್ತೇನೆ. ಇದರಲ್ಲಿ ಉಪಕಾರವೆಂಥದು? ನಾನು ದಿನವಿಡೀ ಇಂಥ ಕೆಲಸಗಳನ್ನೇ ಮಾಡುತ್ತಿರುತ್ತೇನೆ" ಎಂದ ಸಾಥಿಯಾ.

ಸುಷ್ಮಾ ಮತ್ತೊಂದು ನೂರರ ನೋಟನ್ನು ತಂದು ಅವನ ಕೈಯಲ್ಲಿಡುತ್ತ, "ಜೊತೆಗೆ ಕೊತ್ತಂಬರಿ ಸಿವುಡೊಂದು, ಸ್ವಲ್ಪ ಹಸಿ ಮೆಣಸಿನಕಾಯಿ ಮತ್ತು ಒಂದು ತೆಂಗಿನಕಾಯಿಯನ್ನು ತೆಗೆದುಕೊಂಡು ಬಾ" ಎಂದಳು.

ಸಾಥಿಯಾ ಮತ್ತೊಂದು ಬಟ್ಟೆಯ ಚೀಲವನ್ನು ಸುಷ್ಮಾಳಿಂದ ಇಸಿದುಕೊಂಡು ಓಡಿ ಹೋದ.

ಅರ್ಧಗಂಟೆಯಲ್ಲಿ ಸಾಥಿಯಾ ಎಲ್ಲ ಸಾಮಾನುಗಳನ್ನು ತೆಗೆದುಕೊಂಡು ಬಂದು, ಚಿಮಣಿಎಣ್ಣೆ ಡಬ್ಬಿ ಮತ್ತು ಚೀಲವನ್ನು ಸುಷ್ಮಾಳ ಕೈಗೆ ಕೊಟ್ಟು ಸಾಮಾನುಗಳ ಲೆಕ್ಕದ ವಿವರವನ್ನು ಒಪ್ಪಿಸಿ, ಉಳಿದ ಚಿಲ್ಲರೆ ಹಣವನ್ನು ಅವಳಿಗೆ ಹಿಂದಿರುಗಿಸಿದ.

ಸುಷ್ಮಾ ಐದರ ನೋಟೊಂದನ್ನು "ಇದು ನಿನಗೆ" ಎಂದು ಕೊಟ್ಟಳು.

ಸಾಥಿಯಾ ಅದನ್ನು ಇಸಿದುಕೊಂಡು ತನ್ನ ಪ್ಯಾಂಟಿನ ಜೇಬಿನಲ್ಲಿಟ್ಟುಕೊಂಡ.

"ಸಾಥಿಯಾ ದಾದಾ, ಒಳಗಡೆ ಬಂದು ಸ್ವಲ್ಪ ಕೂತಿರು. ನಾನು ಚಹಾ ಮಾಡುತ್ತೇನೆ. ನೀನೂ ಕುಡಿದು ಹೋಗು" ಎಂದಳು ಸುಷ್ಮಾ.

ಸಾಥಿಯಾ ಒಳಗಡೆ ಬಂದು ನೆಲದ ಮೇಲೆ ಕುಳಿತು ನನ್ನತ್ತ ನೋಡಿದ. ನಾನು ಸುಮ್ಮನೆ ಕುಳಿತು ಪತ್ರಿಕೆಯನ್ನೋದುತ್ತಿದ್ದೆ.

ಅಷ್ಟರಲ್ಲಿ ಸುಷ್ಮಾ, "ರೀ, ನೀವು ಸ್ಟೌನ ಪಿನ್ನನ್ನು ಎಲ್ಲಿಟ್ಟಿದ್ದೀರಿ ? ಈ ಸ್ಟೌ ಉರಿಯುತ್ತಿಲ್ಲ"